# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್ ಇ ವಿ ಎಸ್ ಆರ್:.109/2015-16

ದಿನಾಂಕ : 25-10-2016.

ಉಪಸ್ಥಿತರು : ಡಾ| ರಾಜೇಂದ್ರ ಕೆ.ವಿ. ಐ.ಎ.ಎಸ್.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

---

| ಮೇಲ್ಮನವಿದಾರರು | ಪ್ರತಿವಾದಿಯವರು |
|---|---|
| ಸಂಜೀವ ಬಿನ್ ತಬುರ | ತಹಶೀಲ್ದಾರರು, |
| ನೆಲ್ಲಿಗುಡ್ಡೆ ಮನೆ, | ಬೆಳ್ತಂಗಡಿ ತಾಲೂಕು. |
| ಕಾಶಿಪಟ್ಣ ಗ್ರಾಮ ಮತ್ತು ಅಂಚೆ, | |
| ಬೆಳ್ತಂಗಡಿ ತಾಲೂಕು,ದ.ಕ. | |
| (ನ್ಯಾಯವಾದಿ ಶ್ರೀ ಎ. ಮನೋಹರ ಕುಮಾರ್) | |

ಪ್ರಸ್ತಾವನೆ :

ಬೆಳ್ತಂಗಡಿ ತಾಲೂಕು ಕಾಶಿಪಟ್ಣ ಗ್ರಾಮದ NCRSR.298/91-92 ರಂತೆ ತಹಶೀಲ್ದಾರರು ಕಾಶಿಪಟ್ಣ ಗ್ರಾಮದ ಸ.ನಂ. 263/1ಬಿ, 0-38 ಎಕ್ರೆ ಜಮೀನನ್ನು ಹೊರತುಪಡಿಸಿ ನೀಡಿದ ಸಾಗುವಳಿ ಚೀಟಿ ಆದೇಶ ಪ್ರಶ್ನಿಸಿ ಈ ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49ರಂತೆ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಕಾಶಿಪಟ್ಣ ಗ್ರಾಮದ ಸ.ನಂ. 271,261,262 ಮತ್ತು 263 ಗಳಲಲ್ಲಿ ಮಾಡಿರುವ ಅತಿಕ್ರಮಣವನ್ನು ಸಕ್ರಮೀಕರಿಸಲು ನಮೂನೆ 50 ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರೀ ಜಮೀನಿನಲ್ಲಿ ತೆಂಗು, ಗೇರು, ಹಣ್ಣಿನ ಮರಗಳನ್ನು ಬೆಳೆಸಿರುತ್ತಾರೆ. ಜಮೀನು ಸಕ್ರಮೀಕರಣಕ್ಕೆ ಕಡತ ತಯಾರಿಸಿ , ಸ.ನಂ. 271/2ಜೆ2, 0-06 ಎಕ್ರೆ, 261-1ಸಿ2 ರಲ್ಲಿ 0-16 ಎಕ್ರೆ, 236/1ಬಿ1ಸಿ ರಲ್ಲಿ 0-38 ಎಕ್ರೆ ಹಾಗೂ ಸ.ನಂ. 262/1ಎ2 ರಲ್ಲಿ 0-44 ಎಕ್ರೆ ಗಳಿಗೆ ಕಡತ ತಯಾರಿಸಿ ಅಕ್ರಮ ಸಕ್ರಮ ಸಮಿತಿಯಲ್ಲಿ ಮಂಜೂರಾಗಿರುತ್ತದೆ. ಈ ಜಮೀನಿಗೂ ಸೇರಿ ದಂಡನೆ ಇತ್ಯಾದಿಗಳನ್ನು ಪಾವತಿಸಿರುತ್ತೇನೆ. ಆದರೆ ಸಾಗುವಳಿ ಚೀಟಿ ಸ.ನಂ. 236/1ಬಿ, 0-38 ಎಕ್ರೆಗೆ ನೀಡಿರುವುದಿಲ್ಲ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಬಿಟ್ಟು ಹೋದ ಜಮೀನನ್ನು ಸೇರಿಸಿ ಸಾಗುವಳಿ ಚೀಟಿ ನೀಡುವಂತೆ ಪ್ರತಿವಾದಿಯವರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯ್ತಿಗಾಗಿ ಕಾಲಪರಿಮಿತಿ ಕಾಯ್ದೆ ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 3-11--2015 ರಂದು ಹಾಜರಾಗುವಂತೆ ನೋಟೀಸು ನೀಡಿ ಪ್ರಕರಣವನ್ನು ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ 14-06-2016 ರಂದು ವಿಚಾರಣೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಬೆಳ್ತಂಗಡಿ ತಾಲೂಕು ಕಾಶಿಪಟ್ಣ ಗ್ರಾಮದ ಸ.ನಂ. 236/1ಬಿ, ವಿಸ್ತೀರ್ಣ 0-38 ಎಕ್ರೆಯ ಬಗ್ಗೆ ಪರಿಶೀಲಿಸಿ, ಸದರೀ ಜಮೀನಿಗೂ ಸಾಗುವಳಿ ಚೀಟಿ ನೀಡುವಂತೆ ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರಿಗೆ ಸ.ನಂ. 271/2ಎಫ್2, 0-06 ಎಕ್ರೆ, 261-1ಎಫ್ 0-16 ಎಕ್ರೆ, 261/1ಸಿ, 0-44 ಎಕ್ರೆ ಮತ್ತು ಸ.ನಂ. 236/1ಬಿ ರಲ್ಲಿ 0-38ಎಕ್ರೆ ಜಮೀನುಗಳಿಗೆ ಸಕ್ರಮೀಕರಿಸಲು ಕಡತ ತಯಾರಿಸಿ , ಸಕ್ರಮೀಕರಣ ಸಮಿತಿ ದಿನಾಂಕ: 23-7-1994ರ ಸಮಿತಿ ಸಭೆಯಲ್ಲಿ ಮಂಜೂರು ಮಾಡಿರುವುದಾಗಿದೆ. ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆಗಿರುವ ತಹಶೀಲ್ದಾರರು ಸ.ನಂ. 236ರ ಬಗ್ಗೆ ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯಬಹುದು ಎಂದು ತನ್ನ ಅಭಿಪ್ರಾಯವನ್ನು ಬರೆದಿರುತ್ತಾರೆ. ಪಹಣಿ ಕಲಂ 11 ರಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಿದ ಬಗ್ಗೆ ದಾಖಲಿದೆ. ಅರಣ್ಯ ಇಲಾಖೆಯಿಂದ ಅವರಿಗೆ ಸಂಬಂಧಿಸಿದ ಜಮೀನಲ್ಲವೆಂಬ ಬಗ್ಗೆ ಅಭಿಪ್ರಾಯ ನೀಡಿರುವುದು ಕಡತದಲ್ಲಿ ವರದಿಯಿರುವುದಿಲ್ಲವಾದ ಕಾರಣ ಪ್ರಕರಣದಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿ, , ಪರಿಷ್ಕರಿಸಿ ಈ ದಿನ ದಿನಾಂಕ : 25-10- 2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ| ರಾಜೇಂದ್ರ ಕೆ.ವಿ. ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ : ಮೇಲ್ಮನವಿದಾರರರಿಗೆ ಪರ ನ್ಯಾಯವಾದಿ ಶ್ರೀ .ಎ.ಮನೋಹರ ಕುಮಾರ್,ಬೆಳ್ತಂಗಡಿ ಇವರ ಮುಖಾಂತರ ಜ್ಯಾರಿ
ಪ್ರತಿ : ತಹಶೀಲ್ದಾರರು, ಬೆಳ್ತಂಗಡಿ ತಾಲೂಕು ಇವರಿಗೆ ಕಡತ ಸಂಖ್ಯೆ NCRSR.298/91-92, ಪುಟಸಂಖ್ಯೆ 1 ರಿಂದ 314 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ